


## ಕ್ರೀಡೆ: ಸಕಾಲಿಕ ಲೇಖನ

'ಕ್ರೀಡೆಯಲ್ಲಿ ಲೈಂಗಿಕ ಕಿರುಕುಳ' ಕೆ. ಓಂಕಾರ ಮೂರ್ತಿಯವರ ಲೇಖನ ಸಕಾಲಿಕವಾಗಿದೆ.

-ಕೆ.ಎಸ್.ಚಂದ್ರ, ಕೌಡ್ಲೆ/ ವಿಭಾ ಮುರಳೀಧರ್, ತುಮಕೂರು/ ಕೋಟೇಶ್ವರ ಸೂರ್ಯ ನಾರಾಯಣ ರಾವ್, ಬಿಂಡಿಗನವಿಲೆ ರಂಗರಾಜು, ಕೆ.ಗೋಪಾಲ ರಾವ್, ನಾ.ವೆ.ಮುರ್ಥಿ, ಡಿ.ಎಸ್.ಪಂಕಜ ಸುಬ್ರಮಣ್ಯಂ, ಬೆಂಗಳೂರು/ ನಾಗರಾಜ ಬಣಕಾರ್, ಕೊಟ್ಟೂರು/ ಟಿ.ಎನ್.ಸರಸ್ವತಿ, ತಿಪಟೂರು/ ಮೊಳಕಾಲ್ಮುರು ಸುರೇಶ್, ಬಳ್ಳಾರಿ/ ಎಚ್. ಆನಂದ ಕುಮಾರ್, ಚಿತ್ರದುರ್ಗ/ಎಚ್.ಎನ್.ವಿಶ್ವನಾಥ, ಪಿ.ಗೋವಿಂದರಾಜು, ಶಿವಮೊಗ್ಗ/ ರಾಜೇಂದ್ರ ಕುಮಾರ್, ದೊಡ್ಡಬಳ್ಳಾಪುರ

## ಪೋಷಕರ ಪ್ರತಿಕ್ರಿಯೆ ಏನು?

ಹೀಗಾದರೆ ಮಹಿಳಾ ಕ್ರೀಡಾಪಟುಗಳ ಪಾಡೇನು? ಇವರು ಕ್ರೀಡೆಯಲ್ಲಿ ಪದಕ ಗೆದ್ದು ದೇಶಕ್ಕೆ ಹೆಸರು ತರುವುದಾದರೂ ಹೇಗೆ? ಲೇಖನ ಓದಿದ ನಂತರ ಪೋಷಕರ ಪ್ರತಿಕ್ರಿಯೆ ಏನು?

-ಜಿ. ಚಿನ್ನಸ್ವಾಮಿ, ಚನ್ನಗಿರಿ/ ಸು.ವಿಜಯಲಕ್ಷ್ಮಿ, ಶಿವಮೊಗ್ಗ

## ಪರ್ಯವಸಾನ?

'ಕ್ರೀಡೆಯಲ್ಲಿ ಲೈಂಗಿಕ ಕಿರುಕುಳ' ಕ್ರೀಡೆ ರತಿಕ್ರೀಡೆಯಲ್ಲಿ ಪರ್ಯವಸಾನವಾಗಬಾರದಷ್ಟೆ. (ಇದನ್ನೆಲ್ಲ ಕ್ರೀಡಾ ಮನೋಭಾವದಿಂದ ತೆಗೆದುಕೊಳ್ಳಬೇಕು ಎಂದಾರು, ಕಿರುಕುಳಕರ್ತರು!)

-ಸಿಪಿಕೆ, ಮೈಸೂರು

## ಸಿರಿಗಂಧ- ಶಕುನಿಯ ಹೋಲಿಕೆ ಸಲ್ಲ

ಶಿಕಾಕು ಅವರ 'ಕೋಗಿಲೆಯ ದನಿಯ ಹಿಂದಿನ ಕ್ರೌರ್ಯ' ಬರಹದಲ್ಲಿ ಕೌರವರ ವಿನಾಶಕ್ಕೆ ಕಾರಣನಾದ ಶಕುನಿಗೂ ಶ್ರೀಗಂಧಕ್ಕೂ ಹೋಲಿಸಿದ್ದು ಸರಿಯಲ್ಲ. ತನ್ನ ಆಹಾರಕ್ಕಾಗಿ 'ಸಿರಿಗಂಧ' ತನ್ನ ಬೇರುಗಳನ್ನು ಪಕ್ಕದ ಮರದ ಬೇರಿಗೆ ತಾಕಿಸಿರಬಹುದು. ಅಷ್ಟು ಮಾತ್ರಕ್ಕೆ ಅದು 'ಶಕುನಿ' ಹೇಗಾದೀತು...? ಶಕುನಿಯಾದರೋ ತನ್ನ ವಂಶದ ನಿರ್ನಾಮಕ್ಕೆ ಕಾರಣನಾದ ಕುರುಕುಲದ ನಿರ್ಮೂಲನಕ್ಕೆ ಕೈ ಹಚ್ಚಿದವ!

-ಕೊಹಿಮ, ಬಸರಕೋಡು

## ಸಕಾಲಿಕ ಮಾರ್ಗಸೂಚಿ

'ಸಿ.ಇ.ಟಿ. ವಂಚಿತರು– ಮುಂದೇನು?' (ಸರಸ್ವತಿ ಶಂಕರ್) ಸೂಕ್ತ ಮತ್ತು ಸಕಾಲಿಕ ಲೇಖನ.

-ನೆ.ಲ.ರಾಂ, ಬೆಂಗಳೂರು/ ಡಾ.ಬಸಪ್ಪ ಬಂಗಾರಿ, ಧಾರವಾಡ

## ಕಥೆ ಕಣ್ಣಿಗೆ ಕಟ್ಟಿತು

'ಪ್ರವಾಸಿ' ಕಥೆ ಓದುತ್ತಿದ್ದಾಗ ಗತಕಾಲದ ವೈಭವ ಕಣ್ಣಿಗೆ ಕಟ್ಟಿದಂತಿತ್ತು. ನಿರೂಪಣೆ ಚೆನ್ನಾಗಿದೆ.

-ಚಂದ್ರಶೇಖರ, ಮಡಿಕೇರಿ

## ರೋಮಾಂಚಕ ಧಾರಾವಾಹಿ

ಮಲಯಾಳಂ ಭಾಷೆಯ ಎಂ.ಶ್ರೀಕುಮಾರರ 'ಮದನೋತ್ಸವ' (ಕನ್ನಡಕ್ಕೆ; ಕೇಶವ ಮಳಗಿ) ಧಾರಾವಾಹಿ ಚೆನ್ನಾಗಿ ಮೂಡಿಬಂತು. ಗುರುವಾರ ಯಾವಾಗ ಬರುತ್ತಿದೆಯೋ, ಈ ಕಥೆಯನ್ನು ಯಾವಾಗ ಓದುತ್ತೇವೆಯೋ ಎಂದು ಆತುರದಿಂದ ಕಾಯುತ್ತಿದ್ದೆ. ಅಷ್ಟೊಂದು ರೋಮಾಂಚಕವಾಗಿತ್ತು.

-ಗೀತಾಂಜಲಿ ಗೌಡ, ಕೊಟ್ಟೂರು

## ಓದುಗರಿಗೆ ರಸದೌತಣ

ಒಂಬತ್ತೇ ಕಂತುಗಳಲ್ಲಿ ಧಾರಾವಾಹಿ ಕೊನೆಗೊಂಡಿದ್ದು ಬೇಸರ ತರಿಸಿದೆ. ಆಧ್ಯಾತ್ಮ, ನಾಗರಿಕತೆಯ ಸಮ್ಮಿಳನದೊಂದಿಗೆ ಧಾರಾವಾಹಿ ಮೂಡಿಬಂದಿದ್ದು, ಓದುಗರಿಗೆ ರಸದೌತಣ ನೀಡುತ್ತಿತ್ತು. ಉತ್ತಮ ಅಂತ್ಯ.

-ವೈ.ಎಂ. ಚಂದ್ರಶೇಖರ್, ಸಿದ್ದಾಪುರ

## ಅತಿರಂಜಿತ ಕಥೆ, ಅಶ್ಲೀಲ ಚಿತ್ರ

'ಮದನೋತ್ಸವ' ಕಾದಂಬರಿ ಅತಿರಂಜಿತ 'ಸೆಕ್ಸ್'ನಿಂದ ಕೂಡಿದ್ದು ಇದಕ್ಕಾಗಿ ಚಿತ್ರಿಸಿರುವ ಕೆಲ ಚಿತ್ರಗಳು 'ಸುಧಾ' ಪತ್ರಿಕೆಗೆ ಶೋಭೆ ತರಲಾರವು. 'ಸುಧಾ'ದಂತಹ ಶ್ರೇಷ್ಠ, ಜನಪ್ರಿಯ ಪತ್ರಿಕೆಗೆ ಈ ತೆರನ ಅಶ್ಲೀಲ ಚಿತ್ರಗಳು ಅವಶ್ಯಕವೆ?

-ಹೆಚ್.ಎಂ. ಕಾಳಮ್ಮ, ಬಸರಕೋಡು

## ಕನ್ನಡದಲ್ಲಿ ಕಾದಂಬರಿ ಇಲ್ಲವೆ?

'ಇಳಾ' ಉತ್ತಮ ಧಾರಾವಾಹಿಯಾಗಿತ್ತು. ಆದರೆ 'ಮದನೋತ್ಸವ' ಅಸಂಗತ, ಅಸಂಬದ್ಧ, ಅಪ್ರಸ್ತುತ ಕಥಾನಕ. ಬೇರೆ ಭಾಷೆಯಿಂದ ಇಂತಹ ಕಥೆಗಳನ್ನು ಎರವಲು ತಂದು 'ಸುಧಾ' ವಾರಪತ್ರಿಕೆ ಪ್ರಕಟಿಸುತ್ತಿರುವುದಕ್ಕೆ ವಿಷಾದವೆನಿಸುತ್ತಿದೆ.

- ಶ್ರೀಮತಿ ಬನು ಶಾಸ್ತ್ರಿ, ಬೆಂಗಳೂರು




ಉಪಯೋಗಿಸುವ ವಿಧಾನ

ಅಧಿಕವಾದ ಕ್ರಿಮಿಕೀಟಗಳ ಸೋಂಕಿದ್ದರೆ ಧಾರಕಕ್ಕೆ ಸ್ಪ್ರೇಯರ್ ಜೋಡಿಸಿ ನೇರವಾಗಿ ಸ್ಪ್ರೇ ಮಾಡಬಹುದು.



ಅಥವಾ



ಮನೆಯನ್ನು ಸ್ವಚ್ಛಗೊಳಿಸಲು ಒಂದು ಬಕೆಟ್ ನೀರಿಗೆ 2-3 ಕ್ಯಾಪ್‌ಗಳ ಪ್ರಮಾಣದ ಗಿಡಮೂಲಿಕೆ ಖಟ್ನಿಲ್‌ನ್ನು ಹಾಕಿ ಮಿಶ್ರಣ ಮಾಡಿ

..... ಈ ಕ್ರಿಮಿ ಕೀಟಗಳಿಂದ ಮಲೇರಿಯ, ಕಾಲರ, ಡೆಂಗ್ಯೂ, ಆಮಶಂಕೆ, ಗಂದೆಗಳು ಮತ್ತು ಇನ್ನೂ ಅನೇಕ ಕಾಯಿಲೆಗಳು ಉಂಟಾಗತ್ತವೆ.

ಇಂತಹ ತೊಂದರೆ ಬಾರದಂತೆ ತಡೆಯಲು, ಕ್ರಿಮಿ ಕೀಟಗಳ ನಿವಾರಣೆಗಾಗಿ ಪ್ರತಿದಿನ ಗಿಡಮೂಲಿಕೆ ಖಟ್ನಿಲ್‌ನಿಂದ ನೆಲವನ್ನು ಒರೆಸಬೇಕು. ಈ ಗಿಡಮೂಲಿಕೆ ಖಟ್ನಿಲ್ ನೊಣಗಳು, ಇರುವೆಗಳು, ಸೊಳ್ಳೆಗಳು, ತಿಗಣೆಗಳು, ಜಿರಳೆಗಳು, ಹಲ್ಲಿಗಳು, ಜೇಡ ಮುಂತಾದ ಕ್ರಿಮಿಕೀಟಗಳನ್ನು ನಿವಾರಿಸುತ್ತದೆ. ಇದು ಗಿಡಮೂಲಿಕೆಯಿಂದ ತಯಾರಾಗಿರುವುದರಿಂದ ಯಾವುದೇ ಅಡ್ಡ ಪರಿಣಾಮವಿಲ್ಲದೆ ಸುರಕ್ಷಿತವಾದುದಾಗಿದೆ. ಅಪ್ಯಾಯಮಾನವಾದ ಸುಗಂಧ ಹೊಂದಿದೆ. ನೆಲವನ್ನು ಚೆನ್ನಾಗಿ ಸ್ವಚ್ಛಗೊಳಿಸಿ ಹೊಳೆಯುವಂತೆ ಮಾಡುತ್ತದೆ.

SUPER STOCKIST FOR KARNATAKA
M/s. GIRIJA ASSOCIATES
No.21/22, 1st Floor, J.J. Mansion, H.Siddaiah Road,
Bangalore-560 002. Ph: 22223838 / 22243939 / 22276061

MIDAS HYGIENE INDUSTRIES (P) LIMITED
Tel. No.: 022 32094336
Email: midas.09@gmail.com
Website: www.midashygiene.biz
Trade enquiries solicited